ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೧೫೩

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಕೆ. ಪಿ. ಮಾಗೆಣ್ಣವರ್.—ಅಧ್ಯಕ್ಷರೇ, ಸಿಬ್ಬಂದಿಗಳು ಕಳೆದ ೩ ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಿಕೊಂಡು ಬಂದಿದ್ದಾರೆ. ರಾತ್ರಿ ಹಗಲೆನ್ನದೆ ಇವರು ಕೆಲಸ ಮಾಡುತ್ತಿದ್ದಾರೆ. ಆದುದರಿಂದ ಇವರನ್ನು ಖಾಯಂ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಇವರನ್ನು ಖಾಯಂ ಮಾಡುವುದಕ್ಕೆ ಬರುವುದಿಲ್ಲ. ಇವರನ್ನು ನೇಮಕ ಮಾಡಿಕೊಳ್ಳುವುದು, ಮಂತ್ರಿಗಳ ಮನೆಯೊಳಗೆ ಬೇರೆ ಕೆಲಸ ಮಾಡುವ ಬಗ್ಗೆ ಇವರನ್ನು ನೇಮಕ ಮಾಡಿಕೊಳ್ಳಲಾಗಿದೆ. ಮಂತ್ರಿಗಳು ಎಲ್ಲಿಯವರೆಗೆ ಅಧಿಕಾರದಲ್ಲಿ ಇರುತ್ತಾರೋ ಅಲ್ಲಿಯವರೆಗೆ ನೇಮಕ ಮಾಡಿಕೊಂಡ ಜನರು ಇವರು, ಇವರನ್ನು ನೇಮಕ ಮಾಡುವಾಗ ಸರ್ಕಾರಿ ನೇಮಕಾತಿ ನಿಯಮಗಳನ್ನು ಅಬ್ಸರ್ವ್ ಮಾಡಿ ಮಾಡುವುದಿಲ್ಲ ಇವರಿಗೆ ರಿಸರ್ವೇಷನ್ ಅಥವಾ ರೋಸ್ಟರ್ ಪದ್ಧತಿ ಇರುವುದಿಲ್ಲ, ಮತ್ತು ಆ ಕೆಲಸಕ್ಕೆ ಬೇಕಾಗತಕ್ಕ ಅರ್ಹತೆ ಅವರಲ್ಲಿ ಇರುತ್ತದೋ ಇಲ್ಲವೋ ಗೊತ್ತಿರುವುದಿಲ್ಲ ಆದುದರಿಂದ ಇಂತಹ ಜನರನ್ನು ಖಾಯಂ ಆಗಿ ಸರ್ಕಾರಿ ಸೇವೆಯಲ್ಲಿ ಅಬ್ಸರ್ವ್ ಮಾಡುವುದಕ್ಕೆ ಸಾಧ್ಯವಿಲ್ಲ.

ವಿದ್ಯಾರ್ಥಿಗಳ ಮತ್ತು ದುಡಿಯುವ ಮಹಿಳೆಯರ ಹಾಸ್ಟೆಲ್ ಮತ್ತು ಮಕ್ಕಳ ತೊಟ್ಟಿಲು ಮನೆ

೧೯೫೩ ಶ್ರೀ ಪಂಪಾಪತಿ ಇವರ ಪರವಾಗಿ ಶ್ರೀ ಕೆ. ಬಿ. ಶಾಣಪ್ಪನವರು.— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ದಾವಣಗೆರೆ ನಗರದಲ್ಲಿ ಎಷ್ಟು ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ. ಇವುಗಳಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯಗಳೆಷ್ಟು ?

ಆ) ದುಡಿಯುವ ಮಹಿಳೆಯರಿಗಾಗಿ ಪ್ರತ್ಯೇಕವಾದ ವಸತಿ ಗೃಹ ಪ್ರಾರಂಭಿಸುವ ಯೋಜನೆ ಇದೆಯೇ, ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ದಾವಣಗೆರೆ ನಗರದಲ್ಲಿ ೧೦ ವಿದ್ಯಾರ್ಥಿನಿಲಯಗಳಿವೆ ಇವುಗಳಲ್ಲಿ ೮ ಬಾಲಕ ಮತ್ತು ೨ ಬಾಲಕಿಯರಿಗಾಗಿ ನಡೆಯುತ್ತಿವೆ.

ಆ) ಹೌದು, ದುಡಿಯುವ ಮಹಿಳೆಯರಿಗಾಗಿ ಕೇಂದ್ರ ನಿಯೋಜಿತ ಯೋಜನೆಯೊಂದಿದೆ. ಇದನ್ನು ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯಲ್ಲಿ ವಸತಿ ಗೃಹ ಕಟ್ಟಲು ರಿಜಿಸ್ಟರ್ಡ್ ಆದ ಸ್ವಯಂ ಸೇವಾ ಸಂಸ್ಥೆಗಳಿಗೆ ಧನಸಹಾಯ ನೀಡುವುದು. ದಾವಣಗೆರೆ ನಗರದಲ್ಲಿ ದುಡಿಯುವ ಮಹಿಳೆಯರಿಗಾಗಿ ಒಂದು ವಸತಿ ಗೃಹ ಇದೆ. ಇದನ್ನು ವನಿತಾ ಸಮಾಜದವರು ೧೧,೦೦೦ ರೂ ಧನ (ಆಡ್‌ಹಾಕ್) ಸಹಾಯದಿಂದ ನಡೆಸುತ್ತಿದ್ದಾರೆ.

ಶ್ರೀ ಕೆ. ಬಿ. ಶಾಣಪ್ಪ (ಮಾನ್ಯ ಪಂಪಾಪತಿಯವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ವನಿತಾ ಸಮಾಜದವರು ದುಡಿಯುವ ಮಹಿಳೆಯರಿಗೆ ಕಟ್ಟಡವನ್ನು ಕಟ್ಟುವ ಸಲುವಾಗಿ ೧೦ ಸಾವಿರ ರೂಪಾಯಿಗಳನ್ನು ನೀಡಿದ್ದಾರೆ. ನೀವೂ ಕೂಡ ಸರ್ಕಾರದ ವತಿಯಿಂದ ಧನಸಹಾಯ ನೀಡಿ ಒಂದು ದೊಡ್ಡ ಕಟ್ಟಡವನ್ನು ಕಟ್ಟಲು ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಇದಕ್ಕೆ ಧನಸಹಾಯವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದವರು ಇಬ್ಬರೂ ಕೊಡಬೇಕಾಗುತ್ತದೆ. ಕೇಂದ್ರದವರು ೭½ ಪರ್ಸೆಂಟ್ ಕೊಟ್ಟರೆ, ರಾಜ್ಯ ಸರ್ಕಾರದಿಂದ ೧೨½ ಪರ್ಸೆಂಟ್ ಹಣವನ್ನು ಕೊಡಬೇಕಾಗುತ್ತದೆ. ಮೊದಲು ಕೇಂದ್ರ ಸರ್ಕಾರದವರು ಕೊಟ್ಟರೆ ಅನಂತರ ನಾವು ಕೊಡುತ್ತೇವೆ.

ಶ್ರೀ ಕೆ. ಬಿ. ಶಾಣಪ್ಪ.—ಮೊದಲು ನೀವು ಕೊಟ್ಟರೆ ಆನಂತರ ಆವರು ಎಷ್ಟು ಕೊಡ ಬೇಕಾಗುತ್ತದೆಂದು ಹೇಳಬಹುದು. ಕೇಂದ್ರದಿಂದ ಹಣ ಬರಬೇಕಾದರೆ ನೀವು ಆ ಪ್ರಾಜೆಕ್ಟ್ ರಿಪೋರ್ಟ್‌ನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಅಪ್ಲಿಕೇಷನ್‌ನ್ನು ಕೇಂದ್ರಕ್ಕೆ ಕಳುಹಿಸಿಕೊಡಲು ಹೇಳುತ್ತೇನೆ.

೧೯೮೪–೮೫ ಮತ್ತು ೧೯೮೫–೮೬ ರಲ್ಲಿ ಯಾದಗಿರ್ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕೆಲಸಗಳಿಗಾಗಿ ಮಾಡಲಾದ ವೆಚ್ಚ.

೧೫೦೫. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟಕಲ್).—ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಯಾದಗಿರ್ ತಾಲ್ಲೂಕಿನಲ್ಲಿ ೧೯೮೪–೮೫ ನೇ ಮತ್ತು ೧೯೮೫–೮೬ ನೇ ಸಾಲಿನಲ್ಲಿ ಹೊಸ ಕೆರೆಗಳನ್ನು ಕಟ್ಟುವುದಕ್ಕಾಗಿ ಮತ್ತು ಹಾಲಿ ಇರುವ ಕೆರೆಗಳ ದುರಸ್ತಿಗಾಗಿ ಸಣ್ಣ ನೀರಾವರಿ ಕೆಲಸಗಳಿಗೆ ಎಷ್ಟು ವೆಚ್ಚ ಮಾಡಲಾಗಿದೆ. (ಹೊಸ ಕೆರೆಗಳ ವೆಚ್ಚವನ್ನು ಮತ್ತು ದುರಸ್ತಿ ವೆಚ್ಚವನ್ನು ಬೇರೆ ಬೇರೆಯಾಗಿ ಕೊಡಬೇಕು.

ಆ) ೧೯೮೬–೮೭ನೇ ಸಾಲಿನಲ್ಲಿ ಯಾದಗಿರ್ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕೆಲಸಗಳಿಗೆ (ಹೊಸ ಕೆರೆಗಳ ನಿರ್ಮಾಣಕ್ಕಾಗಿ ಮತ್ತು ಇರುವ ಕೆರೆಗಳ ದುರಸ್ತಿಗಾಗಿ) ಎಷ್ಟು ಹಣ ನಿಗದಿ ಪಡಿಸಲಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು).—

	೧೯೮೪–೮೫	೧೯೮೫–೮೬ (೧೯೮೫ರ ಡಿಸೆಂಬರ್ ವರೆಗೆ)
	ಲಕ್ಷ ರೂ. ಗಳು	ಲಕ್ಷ ರೂ. ಗಳು
ಅ) ಯಾದಗಿರಿ ತಾಲ್ಲೂಕಿನಲ್ಲಿ ಹೊಸ ಸಣ್ಣ ನೀರಾವರಿ ಕೆರೆಗಳ ನಿರ್ಮಾಣಕ್ಕೆ ಆದ ವೆಚ್ಚ ಮತ್ತು ದುರಸ್ತಿ ಕೆಲಸಗಳಿಗೆ ಆಗಿರುವ ವೆಚ್ಚ.	೬.೨೬೬ ೮.೨೬೧	೮.೧೪೬ ೮.೨೫೪

ಆ) ೫೦೬ ಸಣ್ಣ ನೀರಾವರಿ ಶೀರ್ಷಿಕೆಯಲ್ಲಿ ೬.೨೦ ಲಕ್ಷ ರೂ. ಗಳನ್ನು ಸಣ್ಣ ನೀರಾವರಿ ಕೆಲಸಗಳಿಗೆ ಒದಗಿಸಲು ಉದ್ದೇಶಿಸಲಾಗಿದೆ. ದುರಸ್ತಿ ಕೆಲಸಗಳಿಗೆ ಬೇಕಾದ ಹಣವನ್ನು ಒಟ್ಟು ಅನುದಾನದಲ್ಲಿ ಒದಗಿಸಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ಕೇರ್ಸಿಟಿಯಲ್ಲಿ ತಾವು ಹೊಸ ಕೆರೆಗಳ ನಿರ್ಮಾಣಕ್ಕಾಗಿ ಎಷ್ಟು ಹಣವನ್ನು ಖರ್ಚುಮಾಡಿದ್ದೀರೆಂಬುದನ್ನು ಹೇಳುತ್ತೀರಾ ?

ಎರಡನೆಯದಾಗಿ ಈ ವರ್ಷ ಅಂದರೆ ೧೯೮೬–೮೭ನೇ ಸಾಲಿಗೆ ಎಷ್ಟು ಹಣವನ್ನು ಒದಗಿಸುತ್ತಿದ್ದೀರೆಂಬುದನ್ನು ಅಂಕಿ ಸಂಖ್ಯೆಗಳ ಮುಖಾಂತರ ಹೇಳುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಸ್ಕೇರ್ಸಿಟಿಯಲ್ಲಿ ಪ್ರತ್ಯೇಕವಾಗಿ ಖರ್ಚು ಎಷ್ಟಾಗಿದೆ ಎಂಬುದು ನನಗೆ ಗೊತ್ತಿಲ್ಲ. ಈಗ ನನ್ನ ಹತ್ತಿರ ಮಾಹಿತಿ ಇರತಕ್ಕದ್ದು ನನ್ನ 'ಇಲಾಖೆಗೆ ಸಂಬಂಧಪಟ್ಟಂತೆ ಮಾತ್ರ. ಇದನ್ನು ನಾನು ಹೇಳುತ್ತೇನೆ. ಆದರೆ ಸ್ಕೇರ್ಸಿಟಿಗೆ ಸಂಬಂಧಪಟ್ಟಂತೆ ಮಾಹಿತಿ ಬೇಕಾದರೆ ತರಿಸಿಕೊಡುತ್ತೇನೆ.

ಇನ್ನು ೧೯೮೬–೮೭ರ ಸಾಲಿನಲ್ಲಿ ಎಷ್ಟು ಹೊಸ ಕೆಲಸಗಳನ್ನು ತೆಗೆದುಕೊಳ್ಳುತ್ತೀರೆಂದು ಕೇಳಿದ್ದಾರೆ These are all new works.

	Estimate.
Construction of fresh works at Kanagal Allotment made this year Rs. 1.50 lakhs	Rs. 10 lakhs
Constuction of Aneket at Kuntimari	Rs. 6.90 lakhs
Extension of canal to Kallur lift irrigation scheme	Rs. 2 lakhs
Lift irrigation scheme at Chiganur (Work is in progress)	Rs. 12 lakhs